**INDIAN JOURNAL OF HISTORY AND ARCHAEOLOGY**
**ISSN (e):2582-225X www.ijha.in**
**Vol-6, Issue -1, January-February, 2024,**
**PageNo,32- 40**
**Peer -Reviewed, Refereed Journal**

# ಮಧ್ಯಕಾಲೀನ ಕರ್ನಾಟಕದ ಶಾಸನೋಕ್ತ ತೆರಿಗೆಗಳು

***ವೆಂಕಟೇಶ.ಯು.ಆರ್.[1]**

**** ಡಾ.ಎಂ.ಕೋಟ್ರೇಶ್ [2]**

ಯಾವುದೇ ಆಡಳಿತ ವ್ಯವಸ್ಥೆಗೆ ಆರ್ಥಿಕ ಸದೃಢತೆ ಅತ್ಯಂತ ಮುಖ್ಯವಾದುದು. ರಾಜ ಪ್ರಭುತ್ವದಲ್ಲಿ ರಾಜನ ತೀರ್ಮಾನವೇ ಅಂತಿಮ. ಹಾಗಾಗಿ ಹಣದ ಅಗತ್ಯವಿದ್ದಾಗ ರಾಜ ಏಕಪಕ್ಷೀಯವಾಗಿ ತೆರಿಗೆ ವಿಧಿಸುವ ಅಧಿಕಾರ ಪಡೆದಿದ್ದನು. 'ರಾಜನ ಆದಾಯದ ಬಹುಭಾಗವು ತೆರಿಗೆಗಳಿಂದ ಬರುತ್ತಿದ್ದಿತು. ರಾಜನು ದೇಶವನ್ನು ರಕ್ಷಿಸುವುದಕ್ಕೆ ಪ್ರಜೆಗಳು ಹಿಂದಿರುಗಿ ಕೊಡುವ ಪ್ರತಿಫಲವೇ ತೆರಿಗೆಗಳೆಂದು ಗೌತಮ ಸಂಹಿತೆ, ನಾರದ ಸಂಹಿತೆ ಮುಂತಾದ ಸ್ಮೃತಿಗಳು ಭಾವಿಸುತ್ತವೆ.'[೧] ಪ್ರಾಚೀನ ಕಾಲದಲ್ಲಿ ಉತ್ಪನ್ನದ ಆರನೇ ಒಂದು ಭಾಗ ತೆರಿಗೆಯ ರೂಪದಲ್ಲಿ ನೀಡಬೇಕಾಗಿತ್ತೆಂದು ತಿಳಿದು ಬರುತ್ತದೆ. ಈ ನಿಟ್ಟಿನಲ್ಲಿ ಮಧ್ಯಕಾಲೀನ ಕರ್ನಾಟಕದ ಆರ್ಥಿಕ ವ್ಯವಸ್ಥೆಯನ್ನು ಅವಲೋಕಿಸಿದಾಗ ರಾಜ್ಯಕ್ಕೆ ಆದಾಯವನ್ನು ತಂದು ಕೊಡುವಲ್ಲಿ ತೆರಿಗೆಗಳು ಅತ್ಯಂತ ಮುಖ್ಯವಾಗಿದ್ದವು. ಶಾಸನಗಳಲ್ಲಿ ಕರ, ಕಂದಾಯ, ಸುಂಕ, ತೆರಿಗೆ, ತೆರ, ತೇರು, ತೆರೆ, ಶುಲ್ಕ, ಶೀಸೆ, ಹದಿಕೆ, ಹಾರಾಣೆ ಮುಂತಾದ ಹೆಸರುಗಳಿಂದ ತೆರಿಗೆಗಳನ್ನು ಸೂಚಿಸಲಾಗಿದೆ. ಕಾಲ ಸರಿದಂತೆ ಹಳೆಯ ತೆರಿಗೆಗಳ ಬದಲು ಹೊಸ ತೆರಿಗೆಗಳು ಬಂದವು. ಒಕ್ಕಲುತನದ ತೆರಿಗೆ, ವ್ಯಾಪಾರ ಸಂಬಂಧಿ ತೆರಿಗೆ, ಸಾರಿಗೆ, ಸಾಗಾಣಿಕೆ, ವಾಹನ ತೆರಿಗೆ, ವೃತ್ತಿ ತೆರಿಗೆ, ಆಸ್ತಿ ಮೇಲಿನ ತೆರಿಗೆ, ಧಾರ್ಮಿಕ ಶುಲ್ಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಮೇಲಿನ ತೆರಿಗೆಗಳು ರಾಜ್ಯದ ಬೊಕ್ಕಸಕ್ಕೆ ಪ್ರಮುಖ ಆದಾಯ ಮೂಲಗಳಾಗಿದ್ದವು. ಹಾಗಾಗಿ ಈ ಲೇಖನದಲ್ಲಿ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಕೆಲವು ಪ್ರಮುಖ ತೆರಿಗೆಗಳನ್ನು ವಿಶ್ಲೇಷಣೆ ಮಾಡಲಾಗಿದೆ.

---

**[1].ಸಂಶೋಧನಾ ವಿದ್ಯಾರ್ಥಿ,ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು**

**[2].ಪ್ರಾಧ್ಯಾಪಕರು,ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು**

ಮಧ್ಯಕಾಲೀನ ಕಾಲಘಟ್ಟದಲ್ಲಿ ಅಸ್ತಿತ್ವದಲ್ಲಿದ್ದ ಪ್ರಮುಖ ತೆರಿಗೆಗಳೆಂದರೆ, ಸಿದ್ದಾಯ, ಧಾನ್ಯಾಯ ದಶವಂದ, ಒಡ್ಡಲಿ, ಒಕ್ಕಲುದೆರೆ, ಬಾಬಂದಿ, ಬಾಲತೆರಿಗೆ, ಹೆರ್ಜುಂಕ, ವಡ್ಡರಾವುಳ, ಕೊಡವಿಸ, ಬಿಲ್ಕೊಡೆ, ಬೀರುವಣ, ಬಣ್ಣಿಗದೆರೆ, ಬಿಲ್‌ಕೊಡೆ, ಮೂಲೆಸುಂಕ, ಉಪ್ಪಿನ ಮೇಲಿನ ತೆರಿಗೆ, ಕಡ್ಡಾಯ, ತಿಪ್ಪೆಸುಂಕ, ಪನ್ನಸು, ಪನ್ನೀಯ, ಗಾಣದೆರೆ, ಕವಲಿ, ಎಲೆಯ ಹೇರಿನ ತೆರಿಗೆ, ಕುದುರೆ ಮೇಲಿನ ಸುಂಕ ಅಥವಾ ಕುದುರೆ ಗಾಡಿಯ ಸುಂಕ, ಹನ್ನೆರಡು ಹೇರಿನ ಸುಂಕ, ತೋಟದ ಎಲೆ ಮತ್ತು ಅಡಿಕೆ ಮೇಲಿನ ತೆರಿಗೆ, ಮನೆಯ ಮೇಲಿನ ತೆರಿಗೆ, ಅಕ್ಕಸಾಲಿಗರ ಮೇಲಿನ ತೆರಿಗೆ, ಪ್ರಾಣಿಗಳ ಮೇಲಿನ ಸುಂಕ, ಮದುವೆ ಮೇಲಿನ ತೆರಿಗೆ, ಕಿರುಕುಳ ಸುಂಕ, ಗದ್ದೆ ಮೇಲಿನ ತೆರಿಗೆ, ತೋಟದ ಮೇಲಿನ ತೆರಿಗೆ, ಊರ ತಳಭೋಗದ ತೆರಿಗೆ, ಕೊಟ್ಟಲ್ಲಿ ಕೊಂಡಲ್ಲಿನ ಮೇಲಿನ ತೆರಿಗೆ, ಮಾರಿದ ಕೊಂಡ ತೆರಿಗೆ, ಸರಕುಗಳ ಮೇಲಿನ ತೆರಿಗೆ, ಮೆಣಸಿನ ಮೇಲಿನ ತೆರಿಗೆ, ಬೆಲ್ಲದ ಮೇಲಿನ ತೆರಿಗೆ, ಸಕ್ಕರೆ ಮೇಲಿನ ತೆರಿಗೆ, ಅರಿಶಿಣ ಮೇಲಿನ ತೆರಿಗೆ, ಅಜವಾನದ ಮೇಲಿನ ತೆರಿಗೆ, ಸುಂಕ, ಪನ್ನಾಯ, ಹಿಟ್ಟುದೆರೆ, ಗಂಧವನ, ಸಂತೆ ತೆರಿಗೆ, ಹುರಾಯಿ ಸುಂಕ, ಮಾರ ಹೆರವನಸುಂಕ, ಹೊಂಗೆದೆರೆ, ಸೀರೆಯ ಮೇಲಿನ ತೆರಿಗೆ, ಶೆಟ್ಟಿ ದೆರೆ, ಸಂತೆ ಪನ್ನಾಯ ಮುಂತಾದವು.

**ಸಿದ್ದಾಯ : ಸಿದ್ದಾಯವು** ಭೂಕಂದಾಯವಾಗಿದ್ದು, ಕೆಲವೊಮ್ಮೆ ಇಡೀ ಹಳ್ಳಿಗೆ ಹಾಕಲಾಗುತಿತ್ತು. ಇದು ವಾರ್ಷಿಕ ತೆರಿಗೆಯಾಗಿದ್ದು, ನಿರ್ಧರಿತ ಹಣಸಂದಾಯಕ್ಕೆ ಸಿದ್ದಾಯವೆಂತಲೂ ಕರೆಯುತ್ತಾರೆ.

**ಗುಳಿಸುಂಕ** : ಗುಳಿಸುಂಕ ಎಂಬ ಈ ತೆರಿಗೆಯನ್ನು ಗಿಡಗಳನ್ನು ನೆಡುವ ಕುಳಿಗಳ ಮೇಲೆ ವಿಧಿಸಲಾಗುತ್ತಿತ್ತು. ಅಲ್ಲದೆ ತೋಟದಲ್ಲಿ ತೆಂಗು, ಅಡಿಕೆ ಮುಂತಾದ ಮರಗಳ ಮೇಲೆ ತೆರಿಗೆ ವಿಧಿಸಲಾಗುತ್ತಿತ್ತು. ಗುಳಿದೆರೆ ಎಂದು ಇದನ್ನು ಕರೆಯಲಾಗಿದೆ. ಗುಳಿಸುಂಕದ ಉಲ್ಲೇಖ ಕ್ರಿ.ಶ.೧೪೨೨ರ ಶಾಸನದಲ್ಲಿ[೨] ಬಂದಿರುವುದನ್ನು ಕಾಣಬಹುದು.

**ಕುಟಿದೆಜಿಗೆ** : ಒಕ್ಕಲುತನದ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು **ಕುಟಿದೆಜಿಗೆ** ಎನ್ನಲಾಗುತ್ತಿತ್ತು. ಕ್ರಿ.ಶ.೧೫೦೬ರ ವಿಜಯನಗರ ನರಸಿಂಹ ಮಹಾರಾಜನ ಆಳ್ವಿಕೆಯ ಶಾಸನದಲ್ಲಿ ಕುಟಿದೆಜಿಯ ಉಲ್ಲೇಖವಿದೆ.[೩] ಕುಟಿ ಎಂದರೆ ರಂಟೆಯ ಕುಳ ಎಂಬ ಅರ್ಥವನ್ನು ವಿದ್ವಾಂಸರು ನೀಡಿದ್ದಾರೆ.[೪] ಕುಳಕ್ಕೆ ಕುಂಟೆ, ನೇಗಿಲುಗಳ ಬಾಯಿಗೆ ತೊಡಿಸುವ ಕಬ್ಬಿಣದ ಪಟ್ಟಿ, ಹಲ್ಲು ಎಂಬ ಅರ್ಥಗಳೂ ಇವೆ.

**ಗ್ರಾಮದೆರೆ:** ಇದು ಗ್ರಾಮದ ಮೇಲಿನ ತೆರಿಗೆಯಾಗಿರುವುದರಿಂದ ಬಹುಶಃ ಗ್ರಾಮದ ಎಲ್ಲಾ ಜಮೀನು ಗ್ರಾಮದ ನಿಯಂತ್ರಣ, ನಿರ್ವಹಣೆ ಮತ್ತು ಒಡೆತನದಲ್ಲಿ ಇದ್ದಾಗ ಸುಲಭ ಸಾಧ್ಯವಾಗುವುದೆಂದು ಊಹಿಸಿ

ಅರ್ಥೈಸ ಬಹುದಾಗಿದೆ. ಈ ಬಗೆಯ ತೆರಿಗೆಯ ಉಲ್ಲೇಖವು ಕಡೂರಿನ ಕ್ರಿ.ಶ.೯೨೯ರ ಶಾಸನವೊಂದರಲ್ಲಿ ಕಂಡು ಬರುತ್ತದೆ.

**ಅಡಿಕೆ ಸುಂಕ** : ಅಡಿಕೆಯ ಮೇಲಿನ ಮಾರಾಟ ತೆರಿಗೆಯೇ ಅಡಿಕೆ ಸುಂಕ. ಕ್ರಿ.ಶ. ೧೪೩೧ರ ಪ್ರೌಢದೇವರಾಯನ ಶಾಸನದಲ್ಲಿ ಅಡಿಕೆ ಸುಂಕ ವಿಧಿಸಿರುವ ಪ್ರಸ್ತಾಪವಿದೆ.[೫]

**ಪಲದೆರೆ** : ಪಲದೆರೆಯು ಹಣ್ಣಿನ ತೋಟಗಳ ಮೇಲಿನ ತೆರಿಗೆ ಎಂದು ಪರಿಗಣಿಸಲಾಗಿದೆ. 'ಪಲ' ಎಂಬುದಕ್ಕೆ ಒಂದು ತೂಕದ ಪ್ರಮಾಣ; ಕಾಲದ ಒಂದು ಪರಿಮಾಣ; ಮಾಂಸ; ಹುಲ್ಲು ಎಂಬ ಅರ್ಥಗಳಿವೆ. ಪಲದೆರೆಯು ಮಾಂಸದ ವ್ಯಾಪಾರದ ಮೇಲೆ ವಿಧಿಸಿದ ತೆರಿಗೆ ಎಂದೂ ಸಹ ಪರಿಗಣಿಸಲು ಅವಕಾಶವಿದೆ. ಈ ತೆರಿಗೆಯ ಉಲ್ಲೇಖವನ್ನು ಕ್ರಿ.ಶ.೧೫೩೦ರ ವೀರನಂಜರಾಜನ ಶಾಸನದಲ್ಲಿ ಕಾಣಬಹುದು.[೬]

**ಆಲೆದೆಱೆ** : ಕಬ್ಬಿನ ಗಾಣದ ಮೇಲೆ ವಿಧಿಸುತ್ತಿದ್ದ ತೆರಿಗೆಯೇ ಆಲೆದೆಱೆ. ಕ್ರಿ.ಶ.೧೪೦೨ರ ಇಮ್ಮಡಿ ಹರಿಹರನ ಶಾಸನದಲ್ಲಿ ಆಲೆದೆಱೆಯ ಉಲ್ಲೇಖವಿದೆ.[೭] ಆಲೆದೆಱೆಯನ್ನು ಶಾಸನಗಳಲ್ಲಿ ಆಲೆಯಸುಂಕ ಎಂದೂ ಉಲ್ಲೇಖಿಸಲಾಗಿದೆ.

**ಆಡುದೆಱೆ** : ಆಡುಗಳ ಮೇಲಿನ ಕರವನ್ನು ಆಡುದೆಱೆ ಎಂದು ಪರಿಗಣಿಸಲಾಗಿದೆ.[೮] ಆಡುಗಳನ್ನು ಸಾಕುವುದು ವಾಣಿಜ್ಯ ಚಟುವಟಿಕೆಯೆಂದು ಪರಿಗಣಿಸಲಾಗಿದ್ದಿತು. ಈ ಕಾರಣಕ್ಕಾಗಿಯೇ ಆಡುಗಳನ್ನು ಸಾಕುವವರ ಮೇಲೆ ತೆರಿಗೆ ವಿಧಿಸಲಾಗುತ್ತಿತ್ತು.[೯]

**ಮೊಟ್ಟೆ ಸುಂಕ** : ಮೊಟ್ಟೆ ಸುಂಕವನ್ನು ಸರಕುಗಳ ತಲೆ ಹೊರೆಯ ಮೇಲಿನ ಸುಂಕ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೧೦] ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಕಿಸಗೂರಿನ ಕ್ರಿ.ಶ.೧೪೪೦ರ ಪ್ರೌಢದೇವರಾಯನ ಶಾಸನದಲ್ಲಿ ಮೊಟ್ಟೆ ಸುಂಕದ ಪ್ರಸ್ತಾಪವಿದೆ.[೧೧] ಮೊಟ್ಟೆ ಸುಂಕವನ್ನು ಅನೇಕ ಶಾಸನಗಳು ಉಲ್ಲೇಖಿಸಿವೆ.

**ಮನೆವಣ** : ಮನೆಗಳ ಮೇಲೆ ವಿಧಿಸುವ ತೆರಿಗೆಯನ್ನು ಮನೆವಣ ಎಂದು ಕರೆಯಲಾಗುತ್ತಿತ್ತು. ಕ್ರಿ.ಶ.೧೫೨೬ರ ಕೃಷ್ಣದೇವರಾಯನ ಕಾಲದ ಶಾಸನದಲ್ಲಿ ಮನೆವಣದ ಪ್ರಸ್ತಾಪ ಬಂದಿದೆ. ಮನೆವಣವನ್ನು ಯಾವ ಮನೆಗಳಿಗೆ ವಿಧಿಸುತ್ತಿದ್ದರೆಂಬುದು ಸ್ಪಷ್ಟವಾಗುವುದಿಲ್ಲ. ಈ ತೆರಿಗೆಯನ್ನು ರಾಜ ವಿಧಿಸುತ್ತಿದ್ದನೋ, ಸ್ಥಳೀಯ ಆಡಳಿತ ವಿಧಿಸುತ್ತಿದ್ದರೊ ಎಂಬುದು ಶಾಸನಗಳಿಂದ ತಿಳಿಯುವುದಿಲ್ಲ.[೧೨]

**ಮಗ್ಗದೆರೆ:**

ನೇಯ್ಗೆಯ ಮಗ್ಗಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ಮಗ್ಗದೆರೆ ಎಂದು ಕರೆಯಲಾಗಿದೆ. ಒಂದು ಮಗ್ಗಕ್ಕೆ ಒಂದು ವರಹ ಗದ್ಯಾಣವನ್ನು ಸುಂಕವಾಗಿ ಪಡೆಯುತ್ತಿದ್ದ ವಿಚಾರವನ್ನು ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ ಶಾಸನ ತಿಳಿಸುತ್ತದೆ.[೧೩]

**ಕಾವಲಿದೆರೆ :** ಕಾವಲಿದೆರೆ ಉಪ್ಪಿನ ಕಾವಲಿ ಮೇಲಿನ ತೆರಿಗೆ ಎಂದು ಅರ್ಥೈಸಲಾಗಿದೆ. ಆದರೆ ಮಂಡ್ಯ ಜಿಲ್ಲೆಯ ಪಾಂಡವಪುರ, ಮಳವಳ್ಳಿಯ ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಕಾವಲಿದೆರೆಯು ಉಪ್ಪಿನ ಕಾವಲಿ ಮೇಲಿನ ತೆರಿಗೆಯಾಗಿರದೆ, ನೀರಾವರಿ ಕಾಲುವೆಯ ಮೇಲೆ ವಿಧಿಸಲಾಗುತ್ತಿದ್ದ ತೆರಿಗೆಯಾಗಿದೆ. ಈ ಪ್ರದೇಶದಲ್ಲಿ ಕಾಲುವೆಯನ್ನು ಕಾವಲಿ ಎಂದು ಕರೆಯುವುದು ರೂಢಿಯಲ್ಲಿದೆ. ಕಾವಲಿದೆರೆಯನ್ನು ಕ್ರಿ.ಶ.೧೪೦೨ರ ಎರಡನೇ ಹರಿಹರನ ಶಾಸನದಲ್ಲಿ ಉಲ್ಲೇಖಿಸಿದೆ.[೧೪]

**ಬಣಜಮಗ ಸುಂಕ :** ಬಣಜಿಗ ವರ್ಗದ ಮೇಲಿನ ಕರವನ್ನು ಬಣಜಮಗ ಸುಂಕ ಎಂದು ಕರೆಯಲಾಗುತ್ತದೆ.[೧೫] ಕ್ರಿ.ಶ.೧೫೩೦ರ ಉಮ್ಮತ್ತೂರಿನ ವೀರನಂಜರಾಜ ನಂಜನಗೂಡಿನ ನಂಜುಂಡೇಶ್ವರ ದೇವರಿಗೆ ಗ್ರಾಮವನ್ನು ದಾನ ಬಿಟ್ಟ ಸಂದರ್ಭದಲ್ಲಿ ಬಣಜಮಗ ಸುಂಕದಿಂದ ಮುಕ್ತಮಾಡಿದ ವಿಚಾರ ಬರುತ್ತದೆ.[೧೬]

**ಬೋಗಾರಿಕೆ, ಬೋಗಾರದೆರೆ :** ಶಾಸನಗಳಲ್ಲಿ ಉಲ್ಲೇಖಗೊಂಡಿರುವ ಬೋಗಾರಿಕೆ, ಬೋಗಾರದೆರೆಯು ಕಂಚು, ತಾಮ್ರ ಮೊದಲಾದ ಲೋಹಗಳ ಕೆಲಸ ಮಾಡುವವರ ಮೇಲೆ ವಿಧಿಸಲಾಗುತ್ತಿದ್ದ ತೆರಿಗೆಯಾಗಿದೆ. ಕ್ರಿ.ಶ.೧೫೦೭ರ ವೀರ ಚಿಕ್ಕಣ್ಣ ವೊಡೆಯನ ಶಾಸನದಲ್ಲಿ ಬೋಗಾರಿಕೆ ಎಂಬ ಉಲ್ಲೇಖವಿದೆ.[೧೭]

**ವೋಜುಗಳ ತೆರಿಗೆ :** ವೋಜರು ಕಲ್ಲುಕುಟಿಗ ವೃತ್ತಿಯನ್ನು ಮಾಡುವವರು. ಕಲ್ಕುಟಿಗನ ಉದ್ಯೋಗದ ಮೇಲೆ ವಿಧಿಸುವ ಕರವನ್ನು ವೋಜುಗಳ ತೆರಿಗೆ ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಕ್ರಿ.ಶ.೧೫೨೧ರ ಕೃಷ್ಣದೇವರಾಯನ ಶಾಸನದಲ್ಲಿ ವೋಜುಗಳ ತೆರಿಗೆಯ ಪ್ರಸ್ತಾಪವಿದೆ.[೧೮] ಇದೊಂದು ವೃತ್ತಿ ತೆರಿಗೆಯಾಗಿದೆ.

**ಕಂಮಾರ ದೆರೆ :** ಕಮ್ಮಾರ ವೃತ್ತಿ ಮಾಡುವವರ ಮೇಲೆ ವಿಧಿಸಲಾಗುತ್ತಿದ್ದ ತೆರಿಗೆ. ಹಿಂದೆ ಗುರುತಿಸಲಾದ ಆಹಳದೆರೆಯೂ ಕಮ್ಮಾರರ ಮೇಲೆ ವಿಧಿಸುತ್ತಿದ್ದ ತೆರಿಗೆಯಾಗಿದೆ. ಕ್ರಿ.ಶ.೧೫೦೭ರ ವೀರ ಚಿಕ್ಕಣ್ಣಒಡೆಯನ ಶಾಸನದಲ್ಲಿ ಕಂಮಾರದೆರೆಯ ಉಲ್ಲೇಖವಿದೆ.[೧೯]

**ನಾಯಿಂದರ ತೆರಿಗೆ :** ನಾಯಿಂದ ತೆರಿಗೆಯು ನಾಯಿಂದ ವೃತ್ತಿ ನಿರ್ವಹಿಸುವವರ ಮೇಲೆ ಅಂದರೆ ಕ್ಷೌರಿಕರ ಮೇಲೆ ವಿಧಿಸುತ್ತಿದ್ದ ತೆರಿಗೆಯಾಗಿದೆ. ವೃತ್ತಿ ತೆರಿಗೆಯಾಗಿದ್ದ ಇದರ ಪ್ರಸ್ತಾಪ ಕ್ರಿ.ಶ.೧೫೨೧ರ ಕೃಷ್ಣದೇವರಾಯನ ಕಾಲದ ಶಾಸನದಲ್ಲಿ ಬಂದಿದೆ.[೨೦]

**ಮಾದಾರದೆಱೆ :** ಚರ್ಮದ ಕೆಲಸವನ್ನು ಮಾಡುವ ವ್ಯಕ್ತಿಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ಮಾದಾರದೆಱೆ ಎಂದು ಕರೆಯಲಾಗುತ್ತಿತ್ತು. ಕ್ರಿ.ಶ. ೧೫೦೭ರ ವೀರ ಚಿಕ್ಕಣ್ಣವೊಡೆಯನ ಕಾಲದ ಶಾಸನದಲ್ಲಿ 'ಮಾದಾಜಿಕೆ' ಎಂದು ಮಾದಾರ ತೆರಿಗೆಯನ್ನು ಉಲ್ಲೇಖೀಸಲಾಗಿದೆ.[೨೧]

**ಹೆರ್ಜುಂಕ :** ಕ್ರಿ.ಶ.೧೪೯೫ರ ಇಮ್ಮಡಿ ನರಸಿಂಗ ಮಹಾರಾಜನ ಕಾಲದ ಶಾಸನದಲ್ಲಿ ವಿವಿಧ ತೆರಿಗೆಗಳನ್ನು ವಿವರಿಸುವಾಗ ಹೆರ್ಜುಂಕವನ್ನೂ ಉಲ್ಲೇಖಿಸಲಾಗಿದೆ. ಪ್ರಾಚೀನ ಶಾಸನಗಳಲ್ಲಿ ಹೆರ್ಜುಂಕವನ್ನು ಪೆರ್ಜುಂಕ ಎಂದು ಕರೆಯಲಾಗಿದೆ. ಹಿರಿಯಸುಂಕ, ಹೆಚ್ಚು ಆದಾಯ ತರುವ ಸುಂಕ ಎಂಬ ಅರ್ಥವು ಹೆರ್ಜುಂಕಕ್ಕಿದೆ.

**ಆನೆಯಸೇಸೆ :** ಆನೆಯ ದಂಡಿನ ನಿರ್ವಹಣೆಗಾಗಿ ಕೊಡಬೇಕಾಗಿದ್ದ ತೆರಿಗೆಯಾಗಿದೆ. ಹೊಯ್ಸಳ ಕಾಲದಲ್ಲಿ ಆನೆಸೇಸೆ ಎಂದು ಕರೆಯಲ್ಪಟ್ಟ ಪ್ರಸ್ತುತ ತೆರಿಗೆಯು, ವಿಜಯನಗರ ಕಾಲದಲ್ಲಿ ಆನೆದೆರೆ ಎಂದು ಕರೆಯಲಾಗಿದೆ.[೨೨]

**ಬೆಟ್ಟದ ಕಾವಲು :** ಬೆಟ್ಟದ ಮೇಲೆ ಹುಲ್ಲು ಮೇಯಿಸುವುದಕ್ಕೆ ಕೊಡಬೇಕಾದ ಕರ ಬೆಟ್ಟದ ಕಾವಲು ಸುಂಕವೆಂದು ಕುರಿಗಾಹಿಗಳು, ದನ ಮೇಯಿಸುವವರ ಮೇಲೆ ಪ್ರಸ್ತುತ ತೆರಿಗೆ ವಿಧಿಸಲಾಗುತ್ತಿತ್ತು. ಆದಾಯದ ಭಿನ್ನ ಮೂಲವಾಗಿ ಬೆಟ್ಟದ ಕಾವಲು ಸುಂಕ ಕಂಡು ಬಂದಿದೆ. ಕ್ರಿ.ಶ.೧೫೨೧ರ ಶಾಸನದಲ್ಲಿ ಬೆಟ್ಟದ ಕಾವಲು ಉಲ್ಲೇಖವಿದೆ.[೨೩]

**ಸ್ಥಳಸುಂಕ :** ಸ್ಥಾನಿಕರ ಮೇಲೆ ವಿಧಿಸುವ ತೆರಿಗೆಯನ್ನು ಸ್ಥಳಸುಂಕವೆನ್ನುವರು. ಸ್ಥಾನಿಕನೆಂದರೆ ದೇವಾಲಯದ ಪಾರುಪತ್ಯಗಾರನಾಗಿದ್ದಾನೆ. ಕ್ರಿ.ಶ.೧೪೯೫ರ ಇಮ್ಮಡಿ ನರಸಿಂಹನ ಶಾಸನದಲ್ಲಿ, ದಳವಾಯಿ ಮಲ್ಲಣ್ಣ ಜಂಬೂರಿನ ಜಕ್ಕೇಶ್ವರ ದೇವರಿಗೆ ದೇವಿಗೆರೆ ಎಂಬ ಹಳ್ಳಿಯ ಸಮಸ್ತ ಆದಾಯ ಮತ್ತು ವಿವಿಧ ತೆರಿಗೆಗಳನ್ನು ಮುಕ್ತ ಮಾಡುತ್ತಾನೆ. ಆ ಸಂದರ್ಭದಲ್ಲಿ ಸ್ಥಳಸುಂಕ ಬಿಟ್ಟ ವಿಚಾರ ಎಂದು ತಿಳಿಯುತ್ತದೆ.[೨೪]

**ವೊಳವಾರು :** ವ್ಯಾಪಾರ ವಹಿವಾಟಿನ ಸಂದರ್ಭದಲ್ಲಿ ಊರಿನ ಒಳಗೆ ಬಂದ ಸರಕುಗಳ ಮೇಲೆ ವಿಧಿಸುವ ತೆರಿಗೆಯನ್ನು ವೊಳವಾರು ಎನ್ನುವರು. ಇದನ್ನು ಒಳವಾರು ಎಂದೂ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.[೨೫]

**ಬಿನುಗುದೆರೆ:** ಬಿನುಗು ಪ್ರಜೆಗಳು, ಬಿನುಗು ಎಂದು ಶಾಸನಗಳಲ್ಲಿ ಉಲ್ಲೇಖಗೊಂಡಿರುವ ವ್ಯಕ್ತಿಗಳು ಸಮಾಜದಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನವನ್ನು ಹೊಂದಿರುವ ವ್ಯಕ್ತಿಗಳಾಗಿದ್ದಾರೆ. ಬಡವ ಎಂಬ ಅರ್ಥ 'ಬಿನುಗು' ಶಬ್ದಕ್ಕಿದೆ. ಬಿನುಗುದೆರೆಯನ್ನು ಬಡವರ ಮೇಲೆ ವಿಧಿಸುತ್ತಿದ್ದ ಅಂಶ ಶಾಸನಗಳಿಂದ ತಿಳಿಯುತ್ತದೆ. ಕ್ರಿ.ಶ.೧೪೨೨ರ ಎರಡನೇ ಹರಿಹರನ ಶಾಸನ,[೨೬] ಹಾಗೂ ಕ್ರಿ.ಶ.೧೪೯೨ರ ಉಮ್ಮತ್ತೂರಿನ ವೀರನಂಜರಾಜನ ಶಾಸನಗಳಲ್ಲಿ 'ಬಿನುಗು'ವಿನ ಉಲ್ಲೇಖವಿದೆ.

**ಕಂನಡಿತೆರಿಗೆ :** ದೇವಾಲಯಗಳಲ್ಲಿ ನೃತ್ಯಗಾರ್ತಿಯರ ಮೇಲೆ ವಿಧಿಸುತ್ತಿದ್ದ ತೆರಿಗೆಯಾಗಿದೆ. ಪ್ರಾಚೀನ ಶಾಸನಗಳಲ್ಲಿ ಕನ್ನಡಿವಣ ಎಂದು ಕರೆಯಲಾಗಿದೆ. ಕ್ರಿ.ಶ. ೧೫೦೬ರ ತುಳುವ ನರಸಿಂಹದೇವನ ಆಳ್ವಿಕೆಯ ಕಾಲದಲ್ಲಿ ಉಮ್ಮತ್ತೂರಿನ ಮಲ್ಲರಾಜನು, ನಾಗಭಟ್ಟ ಎಂಬ ವ್ಯಕ್ತಿಗೆ ಮೊನೆಮುಟ್ಟರಹಳ್ಳಿ ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಿ, ಆ ಗ್ರಾಮದಿಂದ ಬರುತ್ತಿದ್ದ ವಿವಿಧ ತೆರಿಗೆಗಳಿಂದ ಬರುವ ಆದಾಯವನ್ನು ನಾಗಭಟ್ಟನಿಗೆ ಏಕಸ್ವಾಮ್ಯವಾಗಿ ನೀಡಿದ ವಿಚಾರವನ್ನು ತಿಳಿಸುವ ಶಾಸನದಲ್ಲಿ '**ಕಂನಡಿತೆರಿಗೆ**'ಯ ಪ್ರಸ್ತಾಪ ಬಂದಿದೆ.[೨೭]

**ಪರಿಹಾರದ ಸುಂಕ :** ಕ್ರಿ.ಶ.೧೩೮೧ರ ಬುಕ್ಕರಾಯನ ಆಳ್ವಿಕೆಯ ಶಾಸನವು 'ಪರಿಹಾರ ಸುಂಕ'ವನ್ನು ಉಲ್ಲೇಖಿಸುತ್ತದೆ. [೨೮] ಪ್ರಸ್ತುತ ಸುಂಕವನ್ನು ಯಾವ ವಿಚಾರಕ್ಕೆ ಪರಿಹಾರವಾಗಿ ನೀಡಬೇಕಾಗಿತ್ತು ಎಂಬುದನ್ನು ನಿರ್ಧರಿಸುವುದು ಕಷ್ಟವಾಗಿದೆ. ಶಾಸನಗಳಲ್ಲಿ ಅಕರ, ಆಯಮಾನ್ಯ, ಅಭ್ಯಂತರಸಿದ್ಧಿ, ಕುಳ, ಖಂಡಿತ, ತೆರುಮಾನ್ಯ, ಮಾನ್ಯಪರಿಹಾರ ಮುಂತಾದ ಸುಂಕಕ್ಕೆ ವಿನಾಯ್ತಿ ಅಥವಾ ಪರಿಹಾರ ನೀಡುವ ಬಗ್ಗೆ ಉಲ್ಲೇಖವಿದೆ. ಆದರೆ ಪರಿಹಾರದ ಸುಂಕ ಎಂದು ಉಲ್ಲೇಖ ದೊರೆಯುವುದು ವಿರಳ.

**ತುಪ್ಪದೆರೆ :** ತುಪ್ಪದೆರೆಯು ತುಪ್ಪದ ಮೇಲಿನ ತೆರಿಗೆಯಾಗಿದೆ. ಕುಂಚೆಯ ಮಹಾಜನಕ್ಕೆ ಪೆರ್ಮ್ಮಾಡಿಯುಂ ಪ್ರಭುಕಾಮಯ್ಯನು ತಪ್ಪದೆರೆಯನೆಲ್ಲ ಕಾಲಕ್ಕಮ್ ಬಿಟ್ಟ ವಿಷಯ ಕ್ರಿ.ಶ.೮೭೩ರ ದೊಡ್ಡಕುಂಚೆ ಹೊಳೆನರಸೀಪುರದ ಶಾಸನದಲ್ಲಿ ಬಂದಿದೆ.[೨೯]

ಈ ಮೇಲ್ಕಂಡಂತೆ ಚರ್ಚಿಸಲಾದ ವಿವಿಧ ಬಗೆಯ ತೆರಿಗೆಗಳು ಮಧ್ಯಕಾಲೀನ ಕರ್ನಾಟಕದಲ್ಲಿ, ರಾಜ್ಯಕ್ಕೆ ಅಪಾರ ಪ್ರಮಾಣದ ಆದಾಯವನ್ನು ತಂದುಕೊಡುತ್ತಿದ್ದವು. ಇವುಗಳೊಂದಿಗೆ ಒಕ್ಕಲು ತನದ ತೆರಿಗೆಗಳಾದ, ನೀರಾವರಿ ಸೌಕರ್ಯವಿಲ್ಲದ ಭೂಮಿಯ ಮೇಲಿನ ತೆರಿಗೆಯಾದ ಕಾಡಾರಂಭ, ನೀರಾವರಿ ಭೂಮಿಯ ಮೇಲಿನ ತೆರಿಗೆಯಾದ– ನೀರಾರಂಭ, ಒಕ್ಕಲುತನದ ಭೂಮಿಯ ಮೇಲಿನ ತೆರಿಗೆಯಾದ ಒಸಗೆಯ[೩೦] ಉಲ್ಲೇಖಗಳು ಹೆಚ್ಚು ಶಾಸನಗಳಲ್ಲಿ ಕಂಡುಬರುತ್ತವೆ. ಈ ತೆರಿಗೆಗಳು ರಾಜ್ಯಕ್ಕೆ ಕೃಷಿಯಿಂದ ಬರುತ್ತಿದ್ದ ಆದಾಯವನ್ನು ತಿಳಿಸುತ್ತವೆ. ಮದುವೆಯ ಸುಂಕ, ಜಾತಿ ಸುಂಕದಂತಹ ತೆರಿಗೆಗಳು ಸಾಮಾಜಿಕ

ಸಮಾರಂಭಗಳಿಂದ ಬರುತ್ತಿದ್ದ ಆದಾಯವನ್ನು ತಿಳಿಸುತ್ತವೆ. ಜೊತೆಗೆ ವೃತ್ತಿ ತೆರಿಗೆಗಳು ಮಧ್ಯಕಾಲೀನ ಕರ್ನಾಟಕದ ವಿಶೇಷ ತೆರಿಗೆಗಳಾಗಿದ್ದು, ಇದರಿಂದ ಈ ಕಾಲದ ವಿವಿಧ ಬಗೆಯ ವೃತ್ತಿಗಳನ್ನೂ ತಿಳಿಯಬಹುದಾಗಿದೆ. ಶಾಸನಗಳಲ್ಲಿ ಕಂಡು ಬರುವ ಈ ಎಲ್ಲಾ ತೆರಿಗೆಗಳನ್ನು ಅವಲೋಕಿಸಿದರೆ ಅಂದಿನ ಜನತೆಗೆ ಈ ತೆರಿಗೆ ಭಾರವಾಗಿದ್ದಿತ್ತೆಂದೇ ಹೇಳಬಹುದು. ಏಕೆಂದರೆ ಒಬ್ಬ ರೈತ ಮನೆ, ಹೊಲ, ತೋಟ, ತಿಪ್ಪೆ, ಬಣವೆ, ದನ, ಕರು, ಅಲ್ಲದೆ ತಾನು ಬೆಳೆದದ್ದನ್ನು ಮಾರಲು ಹೋದರೆ ಅಲ್ಲಿಯೂ ಸುಂಕವನ್ನು ಕೊಡಬೇಕಾಗಿತ್ತು. ಹೀಗೆ ಎಲ್ಲ ಕಡೆಗೆ ತೆರಿಗೆ ತೆತ್ತ ಮೇಲೆ ಅವನಿಗೆ ಉಳಿಯುವುದಾದರೂ ಏನು? ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ.

**ಕೊನೆ ಟಿಪ್ಪಣಿಗಳು :**

[೧] ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ.೩೯೫.

[೨] ಗೋಪಾಲ.ಬಿ.ಆರ್.(ಸಂ)., ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೮, ಅರಕಲಗೂಡು, ಶಾಸನಸಂಖ್ಯೆ.೧೨, ಬೋಳಕ್ಯಾತನಹಳ್ಳಿ, ಪುಟ.೧೧೦

[೩] ಗೋಪಾಲ.ಬಿ.ಆರ್.(ಸಂ): ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೩, ಗುಂಡ್ಲುಪೇಟೆ, ಶಾಸನ ಸಂಖ್ಯೆ.೨೬, ಹೊಣಕನಹಳ್ಳಿ, ಪುಟ.೨೫.

[೪] ಶ್ರೀನಿವಾಸರಿತ್ತಿ (ಸಂ)., ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ, ಪುಟ.೪೨.

[೫] ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ–೬, ಶ್ರೀರಂಗಪಟ್ಟಣ, ಶಾಸನಸಂಖ್ಯೆ.೩, ಪುಟ.೩೩೪.

[೬] ಅದೇ, ಪುಟ.೩೩೪.

[೭] ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ–೬, ಪಾಂಡವಪುರ, ಶಾಸನ ಸಂಖ್ಯೆ.೨೬೦, ಪುರ, ಪುಟ.೩೨೮.

[೮] ಶ್ರೀನಿವಾಸರಿತ್ತಿ (ಸಂ)., ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾಕೋಶ, ಪುಟ.೫೩.

[೯] ಗೋಪಾಲ.ಬಿ.ಆರ್.(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೬, ಪಾಂಡವಪುರ ೨೬೦, ಪುರ, ಪುಟ.೩೨೮.

[೧೦] ಶ್ರೀನಿವಾಸ ರಿತ್ತಿ (ಸಂ.): ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ ಪುಟ.೪೫.

[೧೧] ಗೋಪಾಲ.ಬಿ.ಆರ್.(ಸಂ): ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೭, ಮಳವಳ್ಳಿ, ಶಾಸನ ಸಂಖ್ಯೆ.೧೦೨, ಕಿಸಗೂರು, ಪುಟ.೧೦೪.

೧೨ ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ–೫, ತಿ.ನರಸೀಪುರ, ಶಾಸನ ಸಂಖ್ಯೆ.೨೪೮, ಹೆಮ್ಮಿಗೆ, ಪುಟ.೬೩೧.

೧೩ ಗೋಪಾಲ.ಬಿ.ಆರ್.(ಸಂ): ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೭, ಮಳವಳ್ಳಿ, ಶಾಸನ ಸಂಖ್ಯೆ.೯೬, ಬೆಳಕವಾಡಿ, ಪುಟ.೪೦೧.

೧೪ ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ–೬, ಪಾಂಡವಪುರ, ಶಾಸನ ಸಂಖ್ಯೆ.೨೬೦, ಪುರ, ಪುಟ.೩೨೮.

೧೫ ಶ್ರೀನಿವಾಸರಿತ್ತಿ(ಸಂ.): ಪ್ರಾಚೀನ ಕರ್ನಾಟಕದ ಪರಿಭಾಷಾಕೋಶ, ಪು.೫೨

೧೬ ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೩, ನಂಜನಗೂಡು, ಶಾಸನ ಸಂಖ್ಯೆ.೩೩೮, ಬಸವಟ್ಟಿಗೆ, ಪುಟ.೩೯೭

೧೭ ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೩, ಗುಂಡ್ಲುಪೇಟೆ, ಶಾಸನ ಸಂಖ್ಯೆ.೩೯, ರಾಘವಪುರ, ಪುಟ.೩೨.

೧೮ ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೩, ಗುಂಡ್ಲುಪೇಟೆ, ಶಾಸನ ಸಂಖ್ಯೆ.೧೩೪, ತ್ರಿಯಂಬಕಪುರ, ಪುಟ.೯೭.

೧೯ ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೩, ಗುಂಡ್ಲುಪೇಟೆ, ಶಾಸನ ಸಂಖ್ಯೆ.೩೯, ರಾಘವಾಪುರ, ಪುಟ.೩೨.

೨೦ ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೩, ಗುಂಡ್ಲುಪೇಟೆ, ಶಾಸನ ಸಂಖ್ಯೆ.೧೩೪, ತ್ರಿಯಂಬಕಪುರ, ಪುಟ.೯೭.

೨೧ ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೩, ಗುಂಡ್ಲುಪೇಟೆ, ಶಾಸನ ಸಂಖ್ಯೆ.೩೯, ರಾಘವಾಪುರ, ಪುಟ.೩೨

೨೨ ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೮, ಅರಕಲಗೂಡು, ಶಾಸನ ಸಂಖ್ಯೆ.೪೮, ರಾಮನಾಥಪುರ, ಪುಟ.೧೪೭.

೨೩ ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಫಿಯಾ ಕರ್ನಾಟಿಕಾ, ಸಂ.೩, ಗುಂಡ್ಲುಪೇಟೆ, ಶಾಸನ ಸಂಖ್ಯೆ.೧೩೪, ತ್ರಿಯಂಬಕಪುರ, ಪುಟ.೯೭.

೨೪ ನರಸಿಂಹಮೂರ್ತಿ.ಎ.ವಿ.(ಸಂ): ಎಕ–೧೦, ಚನ್ನರಾಯಪಟ್ಟಣ, ಶಾಸನ ಸಂಖ್ಯೆ.೪೪, ಜಂಬೂರು, ಪುಟ.೪೬೮.

[೨೫] ಗೋಪಾಲ.ಬಿ.ಆರ್.,(ಸಂ), ಎಪಿಗ್ರಾಪಿಯಾ ಕರ್ನಾಟಿಕಾ, ಸಂ.೮, ಅರಕಲಗೂಡು, ಶಾಸನ ಸಂಖ್ಯೆ.೧೨, ಬೋಳಕ್ಯಾತನಹಳ್ಳಿ, ಪುಟ.೧೦೮.

[೨೬] ಗೋಪಾಲ.ಬಿ.ಆರ್., (ಸಂ), ಎಪಿಗ್ರಾಪಿಯಾ ಕರ್ನಾಟಿಕಾ, ಸಂ.೪, ಚಾಮರಾಜನಗರ, ಶಾಸನ ಸಂಖ್ಯೆ.೩೭೨, ಮಲೆಯೂರು, ಪುಟ.೨೪೬.

[೨೭] ಗೋಪಾಲ.ಬಿ.ಆರ್.(ಸಂ): ಎಪಿಗ್ರಾಪಿಯಾ ಕರ್ನಾಟಿಕಾ, ಸಂ.೭, ಮಳವಳ್ಳಿ, ಶಾಸನ ಸಂಖ್ಯೆ.೧೦೬, ಮುಟ್ಟಹಳ್ಳಿ, ಪುಟ.೪೦೯.

[೨೮] ಗೋಪಾಲ.ಬಿ.ಆರ್.(ಸಂ): ಎಪಿಗ್ರಾಪಿಯಾ ಕರ್ನಾಟಿಕಾ, ಸಂಪುಟ.೪, ಯಳಂದೂರು ೪೧, ಮದ್ದೂರು, ಪು.೨೯೫.

[೨೯] ರೈಸ್.ಬಿ.ಎಲ್.,(ಸಂ), ಎಪಿಗ್ರಾಪಿಯಾ ಕರ್ನಾಟಿಕಾ, ಸಂಪುಟ.೨, ಚಿಕ್ಕಮಗಳೂರು, ಶಾಸನ ಸಂಖ್ಯೆ.೯೩, ಕ್ರಿ.ಶ.೯೦೦

[೩೦] ಶ್ರೀನಿವಾಸ ರಿತ್ತಿ (ಸಂ)., ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ, ಪುಟ.೪೨.